**<u>ಸಾಕ್ಷಿಗೆ ದಿನಾಂಕ 23-03-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ: 1 ಮತ್ತು 2 ನೇ ಎದುರುದಾರರ ಪರ ಶ್ರೀಮತಿ ಎಸ್ ಕೆ ಆರ್ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯ ಪರಿಶೀಲಿಸಿ ಅರ್ಜಿದಾರರ ಅರ್ಜಿಯನ್ನು ವಜಾ ಮಾಡಬೇಕೆಂದು ಪಾರ್ಥಿಸಿಕೊಳ್ಳುತ್ತೇನೆ.

**<u>ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಹೆಚ್ ಎಸ್ ಕೆ ವಕೀಲರಿಂದಃ</u>**

1. ಅಪಘಾತದ ದಿನ ನಾನೇ ಟ್ರಾಕ್ಟರ್ ನ್ನು ಚಾಲನೇ ಮಾಡುತ್ತಿದ್ದೇನು ಎಂದರೆ ಸರಿ. ನನಗೆ ಟ್ರಾಕ್ಟರ್ ಚಾಲನೇ ಮಾಡಲು ಡಿಎಲ್ ಇರುತ್ತದೆ. ಸದರಿ ಡಿಎಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಟ್ರಾಕ್ಟರ್ ಗೆ ಅಪಘಾತದ ಸಮಯಕ್ಕೆ ವಿಮೆ ಇರಲಿಲ್ಲ ಎಂದರೆ ಸರಿ. ಟ್ರಾಕ್ಟರ್ ನ್ನು ಚಾಲನೇ ಮಾಡಲು ನನಗೆ ಡಿಎಲ್ ಇರದೇ ಇರುವುದರಿಂದ ಸದರಿ ಟ್ರಾಕ್ಟರ್ ನ್ನು ಸರಿಯಾಗಿ ಚಾಲನೇ ಮಾಡದೇ ಅಪಘಾತಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿರುತ್ತದೆ ಎಂದು ಪೊಲೀಸರು ದೋಷಾರೋಪಣಾಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ನಾನು ಸಹ ಅಪಘಾತದ ದಿನವೇ ದುದ್ದ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಸದರಿ ದೂರಿನ ಪ್ರತಿಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ಸದರಿ ದೋಷಾರೋಪಣಾಪಟ್ಟಿಯನ್ನು ನಾನು ಪ್ರಶ್ನಿಸಿಲ್ಲ ಎಂದರೆ ಸರಿ.

2. ಅಪಘಾತವು ನನ್ನ ತಪ್ಪಿನಿಂದ ಆಗಿರುವುದರಿಂದ ಯಾವುದೇ ದೂರನ್ನು ನೀಡದೇ ಇದ್ದರೂ ಸಹ ದೂರ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ನೀಡುವ ಭಾದ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಅರ್ಜಿದಾರರ ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹ ಅರ್ಜಿದಾರರ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು-ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**